ದಿನಾಂಕ 09-07-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಈ ದಾವೆಯನ್ನು ಎಷ್ಟು ಆಸ್ತಿಗಳ ಮೇಲೆ ಹೂಡಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಯಾರ ಹೆಸರಿನಲ್ಲಿವೆ ಎಂದು ನಾನು ನೋಡಿರುವುದಿಲ್ಲ. ದಾವಾ ಆಸ್ತಿಗಳು ಮೂಲತಃ ನನ್ನ ತಂದೆ ಮತ್ತು ತಾಯಿಯ ಆಸ್ತಿಗಳಾಗಿರುತ್ತವೆ. ಸರ್ವೆ ನಂ.33 ರ ಆಸ್ತಿ ನಮ್ಮ ತಾಯಿಯ ಆಸ್ತಿಯಾಗಿದ್ದು ಉಳಿದ ಆಸ್ತಿಗಳು ನಮ್ಮ ತಂದೆಯ ಆಸ್ತಿಗಳಾಗಿರುತ್ತವೆ. ನಮ್ಮ ದಾವೆಯಲ್ಲಿ ತೋರಿಸಿರುವ ವಂಶಾವಳಿಯಲ್ಲಿ 3 ನೇ ಪ್ರತಿವಾದಿಯನ್ನು ಪೀರಾಬಿ ಮಗ ಎಂದು ತೋರಿಸಿರುತ್ತೇವೆ ಎಂದರೆ ಸರಿ. ಆತನು ಮಾನಸಿಕ ಅಸ್ವಸ್ಥನಾಗಿದ್ದು ನನ್ನ ಸಂರಕ್ಷಣೆಯಲ್ಲಿಯೇ ಆತನು ಇರುತ್ತಾನೆ. ಆತನ ಸಂರಕ್ಷಕಳಾಗಿ ನಾನು ಯಾವುದೇ ನ್ಯಾಯಾಲಯದಿಂದ ಡಿಕ್ರಿಯನ್ನು ಪಡೆದಿರುವುದಿಲ್ಲ.

2. ದಾವಾ 1 ರಿಂದ 4 ನೇ ಆಸ್ತಿಗಳು ಮೂಲತಃ ಮೋದೀನ್ ಖಾನ್ ಪಾಟೀಲ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ಆತನ ಹೆಂಡತಿ ಹೆಸರು ಮೋದೀನ್ ಬಿ ಎಂದರೆ ಸರಿ. ಅವರುಗಳು ಅಜ್ಜ ಅಜ್ಜಿ ಎಂದರೆ ಸರಿ. ಅವರಿಗೆ ಅಲ್ಲಾಭಕ್ಷಖಾನ್, ಪೀರಾಬಿ, ಜುಲೇಕಬೀ ಮತ್ತು ಜಯಗುಂಬಿ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರುಗಳಲ್ಲಿ ಅಲ್ಲಾಭಕ್ಷಖಾನ್ ಮತ್ತು ಜಯಗುಂಬಿ ಮಕ್ಕಳಿಲ್ಲದೇ ಮರಣ ಹೊಂದಿರುತ್ತಾರೆ ಎಂದರೆ ಸರಿ. ಜುಲೇಕಬೀ ಮತ್ತು ಪೀರಾಬೀ ಗೆ ಮಕ್ಕಳು ಇರುತ್ತಾರೆ ಎಂದರೆ ಸರಿ. ಪೀರಾಬೀ ನನ್ನ ತಾಯಿ ಎಂದರೆ ಸರಿ.

3. ಜುಲೇಕಬೀಯ ಮಕ್ಕಳು ನಮ್ಮ ಮತ್ತು 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಓ.ಎಸ್.ನಂ.137/2014 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆ ರಾಜಿ ಡಿಕ್ರಿಯಲ್ಲಿ ಅಂತ್ಯಗೊಂಡಿರುತ್ತದೆ ಎಂದರೆ ಸರಿ. ಸದರಿ ರಾಜಿ ಡಿಕ್ರಿಯಂತೆ ದಾವಾ 1 ರಿಂದ 4 ನೇ ಆಸ್ತಿಗಳು ನಮ್ಮ ಮತ್ತು 1 ರಿಂದ 3 ನೇ ಪ್ರತಿವಾದಿಗಳ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ವಾದ ಪತ್ರದಲ್ಲಿ ಮತ್ತು ನಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳು ಹೇಗೆ ಬಂದಿರುತ್ತವೆ ಎಂದು ಬರೆಸಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆ ತಾಯಿ ಯಾವಾಗ ಮರಣ ಹೊಂದಿರುತ್ತಾರೆ ಎಂದು ಬರೆಸಿರುವುದಿಲ್ಲ ಎಂದರೆ ಸರಿ. 3 ನೇ ವಾದಿಯ ತಾಯಿಯು ನಮ್ಮ ತಂದೆ ತಾಯಿಯ ಮರಣದ ಪೂರ್ವದಲ್ಲಿ ಮರಣ ಹೊಂದಿರುತ್ತಾಳೆ ಎಂದರೆ ಸರಿ. ಸದರಿ ವಿಷಯವನ್ನು ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ.

4. ದಾವಾ 7 ನೇ ಆಸ್ತಿಯು ಸುಮಾರು 20-30 ವರ್ಷಗಳಿಂದ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತವೆ. ಅದೇ ರೀತಿ ಉಳಿದ ಆಸ್ತಿಗಳು ನಮ್ಮ ಸಹೋದರರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ಸದರಿ ಸಹೋದರರೆಲ್ಲರೂ ಪ್ರತ್ಯೇಕ ಉಳುಮೆ ಮತ್ತು ವಹಿವಾಟು ನಡೆಸಿಕೊಂಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾವು ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ಕುರಿತು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ 7 ನೇ ಆಸ್ತಿಯನ್ನು 4 ನೇ ಪ್ರತಿವಾದಿಯು 2021 ನೇ ಸಾಲಿನಿಂದ ಸಾಗುವಳಿ ಮಾಡಿಕೊಂಡಿರುತ್ತಾನೆ ಎಂದರೆ ಸರಿ. ಸದರಿ ಪ್ರತಿವಾದಿಗೆ 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಖರೀದಿಯಂತೆ 4 ನೇ ಪ್ರತಿವಾದಿ ದಾವಾ 7 ನೇ ಆಸ್ತಿಯನ್ನು ಸಾಗುವಳಿ ಮಾಡಿಕೊಂಡಿರುತ್ತಾನೆ ಎಂದರೆ ಸರಿ. ಸದರಿ ಕಬ್ಜಾಕ್ಕೆ ನಾವು ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

5. ದಾವಾ 7 ನೇ ಸ್ವತ್ತು 1 ನೇ ಪ್ರತಿವಾದಿಯ ಹೆಸರಿಗೆ ಹೇಗೆ ವರ್ಗಾವೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾವು ವಾದಿಗಳು ನೀಡಿದ ಒಪ್ಪಿಗೆಯ ಆಧಾರದ ಮೇಲೆ ನಮ್ಮ ಸಹೋದರರ ಹೆಸರಿಗೆ ದಾವಾ ಆಸ್ತಿಗಳು ವರ್ಗಾವಣೆಯಾಗಿವೆ ಎಂದರೆ ಸರಿಯಲ್ಲ. ಸದರಿ ವರ್ಗಾವಣೆಗಳ ವಿರುದ್ಧ ನಾವು ಯಾವುದೇ ಕಂದಾಯ ಮೇಲ್ಮನವಿ ಸಲ್ಲಿಸಿರುವುದಿಲ್ಲ. 1 ನೇ ಪ್ರತಿವಾದಿ ಹೆಸರಿನಲ್ಲಿ ದಾವಾ 7 ನೇ ಸ್ವತ್ತು ಇರುವುದನ್ನು ಗಮನಿಸಿ 4 ನೇ ಪ್ರತಿವಾದಿ ಸದರಿ ಆಸ್ತಿಯನ್ನು ಖರೀದಿಸಿರುತ್ತಾನೆ ಎಂದರೆ ಸರಿ. ನಾವು 4 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಉಳಿದ ಪ್ರತಿವಾದಿಗಳ ಜೊತೆ ಮಿಲಾಪಿಯಾಗಿ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು: 5 ನೇ ಪ್ರತಿವಾದಿ ಪರ ವಕೀಲರಿಂದ:**

5 ನೇ ಪ್ರತಿವಾದಿ ಮತ್ತು ನಾನು ಪರಸ್ಪರ ಪರಿಚಯ ಇರುವುದಿಲ್ಲ. ಆತನು ದಾವಾ ಆಸ್ತಿಯನ್ನು ಖರೀದಿಸಿರುವ ಕಾರಣ ಪಕ್ಷಗಾರನಾಗಿ ಮಾಡಿರುತ್ತೇವೆ. ದಾವಾ 6 ನೇ ಸ್ವತ್ತನ್ನು ಯಾರು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನಮ್ಮ ತಂದೆ ಜೀವಂತ ಕಾಲದಲ್ಲಿ ಸದರಿ ಆಸ್ತಿಯನ್ನು ಸುಮಾ ಪ್ರಭಾಕರ ಜೋಶಿಯವರಿಗೆ 2005 ನೇ ಸಾಲಿನಲ್ಲ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ 2012 ನೇ ಸಾಲಿನಲ್ಲಿ

ಸುಮಾ ಎಂಬುವವರು ಮಹದೇವಪ್ಪ ಎಂಬುವವರಿಗೆ ಮಾರಾಟ ಮಾಡಿದ್ದರು ಎಂದರೆ ನನಗೆ

ಗೊತ್ತಿಲ್ಲ. ನಂತರ 2018 ನೇ ಸಾಲಿನಲ್ಲಿ 5 ನೇ ಪ್ರತಿವಾದಿಯು ಸದರಿ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

2. 5 ನೇ ಪ್ರತಿವಾದಿಯು ಕಾನೂನುಬದ್ದವಾಗಿ ಹಣ ನೀಡಿ ದಾವಾ 6 ನೇ ಆಸ್ತಿಯನ್ನು ಖರೀದಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಮಹದೇವಪ್ಪ ರವರು ಸಹ ಸುಮಾ ರವರಿಗೆ ಕಾನೂನುಬದ್ದವಾಗಿ ಹಣ ನೀಡಿ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಮ್ಮ ತಂದೆ ಸುಮಾರವರಿಗೆ ದಾವಾ 6 ನೇ ಸ್ವತ್ತನ್ನು ಮಾರಾಟ ಮಾಡಿರುವುದನ್ನು ನಾವು ಇದುವರೆಗೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಈ ದಾವಾ ಹೂಡುವ ಪೂರ್ವದಲ್ಲಿ 5 ನೇ ಪ್ರತಿವಾದಿಯನ್ನು ಬೇಟಿಯಾಗಿರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿಯನ್ನು ದಾವೆ ಹೂಡುವ ಪೂರ್ವದಲ್ಲಿ 5 ನೇ ಪ್ರತಿವಾದಿ ಸಾಗುವಳಿ ಮಾಡಿಕೊಂಡಿರುತ್ತಾನೆ ಎಂದರೆ ಸರಿ. 5 ನೇ ಪ್ರತಿವಾದಿಯು ಕಾನೂನುಬದ್ದವಾಗಿ ದಾವಾ 6 ನೇ ಸ್ವತ್ತನ್ನು ಖರೀದಿಸಿದ್ದರೂ ಸಹ ಆತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.